ಸಂಖ್ಯೆಗಳನ್ನು ಗಮನಿಸಿದಾಗ ವರದಿಯಾದ ಪ್ರಕರಣಗಳು 1995ರಲ್ಲಿ ಇಳಿಮುಖವಾಗಿದ್ದು ಕಂಡು ಬರುತ್ತದೆ.

1994ನೇ ಸಾಲಿನಲ್ಲಿ 179 ಸರಗಳ್ಳತನ ಪ್ರಕರಣಗಳು ದಾಖಲಾಗಿದ್ದು, 56 ಪ್ರಕರಣಗಳು ಪತ್ತೆಯಾಗಿರುತ್ತವೆ. 1995ನೇ ಸಾಲಿನಲ್ಲಿ 177 ಪ್ರಕರಣಗಳು ದಾಖಲಾಗಿದ್ದು, 52 ಪ್ರಕರಣಗಳು ಪತ್ತೆಯಾಗಿರುತ್ತವೆ. ಸರಗಳ್ಳತನವು ಕಳೆದ (1995ರಲ್ಲಿ) ವರ್ಷದಲ್ಲಿ ಕಡಿಮೆಯಾಗಿರುತ್ತದೆ.

ಜನರಲ್ಲಿ ಉಂಟಾಗಿರುವ ಭೀತಿಯ ವಾತಾವರಣ ದೂರ ಮಾಡಲು ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ :

1. ಈ ಪ್ರಕರಣಗಳನ್ನು ತಡೆಗಟ್ಟಲು ಬೆಂಗಳೂರು ನಗರದಲ್ಲಿ ಪ್ರತ್ಯೇಕವಾಗಿ ಹೊರವಲಯ ಪೋಲೀಸ್ ಠಾಣೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಿಬ್ಬಂದಿ ವರ್ಗದವರನ್ನು ಗುರುತಿಸಲಾದ ಸ್ಥಳಗಳಲ್ಲಿ ರಾತ್ರಿ ಮತ್ತು ಹಗಲು ಪ್ರತ್ಯೇಕವಾಗಿ ಗಸ್ತಿ ವ್ಯವಸ್ಥೆಯನ್ನು ಮಾಡಲಾಗಿದೆ.
2. ಪ್ರತಿ ಪೋಲೀಸ್ ಠಾಣೆಯ ವ್ಯಾಪ್ತಿಯಲ್ಲಿ ನಿಯಮಿತವಾದ ನೆರೆಹೊರೆಯ ಕಾವಲು ಸಮಿತಿಯವರ ಸಹಾಯವನ್ನು ಪಡೆದು ರಾತ್ರಿ ಹಾಗೂ ಹಗಲು ಗಸ್ತಿಗೆ ನಿಯೋಜಿಸಲಾಗಿದೆ.
3. ಅತಿ ಸೂಕ್ಷ್ಮ ಪ್ರದೇಶಗಳಲ್ಲಿ ಒಬ್ಬರು ಪೋಲೀಸ್ ಸಬ್ ಇನ್ಸ್‌ಪೆಕ್ಟರ್‌ರವರ ನೇತೃತ್ವದಲ್ಲಿ ವಿಶೇಷವಾದ ಗಸ್ತಿನ ವ್ಯವಸ್ಥೆಯನ್ನು ಮಾಡಲಾಗಿದೆ.
4. ಅಮವಾಸ್ಯೆ ಹಾಗೂ ಅದರ ಹಿಂದೆ ಹಾಗೂ ಮುಂದಿನ ವಾರಗಳಲ್ಲಿ ಗೃಹ ರಕ್ಷಕ ದಳದವರನ್ನು ಪೋಲೀಸ್‌ರವರ ಜೊತೆಯಲ್ಲಿ ಗಸ್ತಿಗಾಗಿ ನೇಮಕ ಮಾಡಲಾಗುತ್ತಿದೆ.
5. ಹೊರವಲಯದ ಸಾರ್ವಜನಿಕರಿಗೆ ಡಕಾಯಿತರ ಪತ್ತೆಗೆ ಹಾಗೂ ಡಕಾಯಿತಿಗಳನ್ನು ತಡೆಯುವುದಕ್ಕಾಗಿ ವಿಶೇಷ ಮಾಹಿತಿಯನ್ನು ಒದಗಿಸಿ ಅಲಾರಂನ್ನು ಅಳವಡಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗಿದೆ.
6. ಪೋಲೀಸರೊಂದಿಗೆ ಸಹಕರಿಸುವ ನಾಗರೀಕರನ್ನು ಗುರುತಿಸಿ ಅವರಿಗೆ ಇಲಾಖೆಯಿಂದ ಪ್ರಶಂಸಾ ಪತ್ರಗಳನ್ನು ನೀಡಲಾಗುತ್ತಿದೆ.

ಪ್ರತಿಯೊಂದು ಪೋಲೀಸ್ ಠಾಣೆಯಲ್ಲಿಯೂ ತಿಂಗಳಿಗೊಮ್ಮೆ ನಾಗರೀಕ ಸಮಿತಿ ಹಾಗೂ ನೆರೆಹೊರೆಯ ಕಾವಲು ಸಮಿತಿಯ ಸಭೆಗಳನ್ನು ಏರ್ಪಡಿಸಿ ಅಪರಾಧ ಸಂಭವಿಸುತ್ತಿರುವ ಪ್ರದೇಶಗಳನ್ನು ಗುರುತಿಸಿ ವಿಶೇಷ ಗಸ್ತು ವ್ಯವಸ್ಥೆಯನ್ನು ಏರ್ಪಾಡು ಮಾಡಲಾಗುತ್ತಿದೆ. ಮುಂಬರುವ ದಿನಗಳಲ್ಲಿಯೂ ಗಸ್ತು ಹಾಗೂ ಅಪರಾಧ ತಡೆಯುವ ಕ್ರಮಗಳನ್ನು ತೀವ್ರಗೊಳಿಸಿ, ಅಪರಾಧಗಳನ್ನು ತಡೆಗಟ್ಟುವ ಪ್ರಮಾಣಿಕ ಪ್ರಯತ್ನ ಮಾಡಲಾಗುತ್ತಿದೆ.

9) ರಾಜಾಜಿನಗರದ 6ನೇ ಬಡಾವಣೆಯಲ್ಲಿರುವ 214 ಸರ್ಕಾರಿ ವಸತಿ ಗೃಹಗಳಿಗೆ ಸುಣ್ಣ ಬಣ್ಣ ಮಾಡಿಸದಿರುವುದರಿಂದ ಗೋಡೆಗಳು ಶಿಥಿಲಗೊಂಡಿರುವುದು.

ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಅಧ್ಯಕ್ಷರೆ, ರಾಜಾಜಿನಗರದ 6ನೇ ಬಡಾವಣೆಯಲ್ಲಿರುವ ಸುಮಾರು 214 ಸರ್ಕಾರಿ ವಸತಿ ಗೃಹಗಳಿಗೆ ಯಾವುದೇ ಸುಣ್ಣಬಣ್ಣಗಳನ್ನು ಮಾಡಿಸಿರುವುದಿಲ್ಲ. ಇದರಿಂದ ಗೋಡೆಗಳು ಶಿಥಿಲಗೊಂಡಿವೆ. ಇದರ ಜೊತೆಗೆ 5-6 ವರ್ಷಗಳ ಹಿಂದೆ ಎಲ್ಲಾ ವಸತಿ ಗೃಹಗಳಿಗೂ ಎ.ಇ.ಎಚ್. ಮಾಡಬೇಕೆಂದು ಅಂದರೆ ಎ ಯಿಂದ ಜೆ ವಸತಿ ಗೃಹಗಳಿಗೆ ಎ.ಎಚ್. ತಂತಿಗಳನ್ನು ಅಳವಡಿಸಿದ್ದು ಇದುವರೆಗೂ ಸಂಪರ್ಕವನ್ನು ನೀಡಿರುವುದಿಲ್ಲ. ಈ

ತಂತಿಗಳು ಹಾಳಾಗಿವೆ. ಇತ್ತೀಚೆಗೆ ಹೆಚ್ ಅಂಡ್ ಜೆ ವಸತಿ ಗೃಹಗಳಿಗೆ ಎ.ಇ.ಹೆಚ್. ಅಳವಡಿಸಲು ವಿದ್ಯುತ್ ಮಾಪನಗಳನ್ನು ಬಹಳ ಕೆಳಗಡೆ ಹಾಕಿರುತ್ತಾರೆ. ಇದರಿಂದ ಮಕ್ಕಳು ಹಾಗೂ ದೊಡ್ಡವರಿಗೆ ಈಗಾಗಲೇ ವಿದ್ಯುತ್ ಸ್ಪರ್ಶದಿಂದ ಅನಾಹುತಗಳು ಉಂಟಾಗಿರುತ್ತದೆ. ಎ.ಇ.ಹೆಚ್. ಗಳನ್ನು ಮಾಡಲು ಹೋಗಿ ಒಂದನೆ ಹಾಗೂ ಎರಡನೆ ಮಹಡಿಗಳ ಮೆಟ್ಟಿಲುಗಳ ಹತ್ತಿರ ಇದ್ದ ದೀಪದ ಸಂಪರ್ಕವನ್ನು ಕಡಿದು ಹಾಕಲಾಗಿದೆ. ಕಳೆದ 8-10 ತಿಂಗಳುಗಳಿಂದ ಮೆಟ್ಟಲುಗಳಿಗೆ ದೀಪಗಳು ಇಲ್ಲದೆ ಬಹಳ ತೊಂದರೆಯುಂಟಾಗಿರುತ್ತದೆ. ಜೀವನ್‌ಭೀಮನಗರದ ವಸತಿ ಗೃಹಗಳಿಗೆ ಎಲ್ಲಾ ರೀತಿಯ ಸೌಲಭ್ಯಗಳನ್ನು ನೀಡುತ್ತಿದ್ದು, ರಾಜಾಜಿನಗರದ ವಸತಿ ಗೃಹಗಳಿಗೆ ಯಾವದೇ ರೀತಿಯ ಸೌಲಭ್ಯಗಳನ್ನು ನೀಡದೆ ತಾರತಮ್ಯ ಉಂಟಾಗಿದೆ. ರಾಜಾಜಿನಗರದ ನೌಕರರು ಜೀವನಭೀಮ ನಗರದ ಅಧಿಕಾರಿಗಳು ಒಂದೇ ರೀತಿಯ ಬಾಡಿಗೆಯನ್ನು ನೀಡುತ್ತಾ ಬಂದಿದ್ದರೂ

ಈ ತಾರತಮ್ಯ ಉಂಟಾಗಿದೆ. ವಿದ್ಯುಚ್ಛಕ್ತಿಯ ದರವು ಜಾಸ್ತಿಯಾಗುವುದೆಂದು ಪರಿಗಣಿಸಿ ವಿದ್ಯುಚ್ಛಕ್ತಿ ಇಲಾಖೆಗೆ ಹಣವನ್ನು ಪಾವತಿ ಮಾಡದೆ ಇರುವುದು ಈ ಒಂದು ಕಾರಣದಿಂದ ನೀರನ್ನು ಸರಿಯಾಗಿ ಕಾಲ ಕಾಲಕ್ಕೆ ಬಿಡದೆ ಇರುವುದರಿಂದ ಅಲ್ಲಿನ ನಿವಾಸಿಗಳು ಬವಣೆ ಪಡುತ್ತಿರುವುದನ್ನು ಮತ್ತು ಅಲ್ಲಿನ ನಿವಾಸಿಗಳು ತಮ್ಮ ತಮ್ಮ ವಾಹನಗಳನ್ನು ನಿಲ್ಲಿಸಲು ಸೂಕ್ತವಾದ ಸ್ಥಳವಿಲ್ಲದೆ ತೊಂದರೆಗೆ ಈಡಾಗಿರುವುದನ್ನು ಮಾನ್ಯ ಲೋಕೋಪಯೋಗಿ ಸಚಿವರ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು) : ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ಮಾನ್ಯ ಸದಸ್ಯರಿಗೆ ವಿವರಗಳನ್ನು ತರಿಸಿ ಕೊಡುತ್ತೇನೆ.

ಅಧ್ಯಕ್ಷರು : ಈಗ 69ನೇ ನಿಯಮದ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪಕಾಲಾವಧಿ ಚರ್ಚೆ .

ನಿಯಮ 69ರ ಮೇರೆಗೆ ಚರ್ಚೆ

ರಾಜ್ಯದಲ್ಲಿ ರೈತರು ಬೆಳೆದಿರುವ ಕಬ್ಬನ್ನು ಹೊಸ ರಾಜ್ಯಗಳಿಗೆ ಸಾಗಿಸಲು ನಿಷೇಧ ವಿಧಿಸಿರುವುದರಿಂದ ರಾಜ್ಯದ ರೈತರಿಗೆ ತೊಂದರೆ.

+ ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) :ಮಾನ್ಯ ಅಧ್ಯಕ್ಷರೆ, ಅತ್ಯಂತ ಗಂಭೀರವಾದಂತಹ ವಿಷಯವೆಂದರೆ, ರೈತ ಬೆಳೆದಂತಹ ಕಬ್ಬನ್ನು ಅರೆಯುವಂತಹ ವ್ಯವಸ್ಥೆ ಇಲ್ಲದೆ ರೈತ ಬೀದಿ ಪಾಲಾಗಿರುವಂತಹ ಈ ಮಹತ್ವವಾದಂತಹ ವಿಷಯವನ್ನು ಈ ನಿಯಮ 69ರ ಅಡಿಯಲ್ಲಿ ಚರ್ಚೆಗೆ ತಾವು ಅನುಮತಿಯನ್ನು ನೀಡಿದ್ದರಿಂದ ತಮಗೆ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ. ಈ ನಾಡಿನ ರೈತರ ಸಂಕಷ್ಟಗಳನ್ನು ಹೇಳುವವರು ಕೇಳುವವರು ಯಾರು ಇಲ್ಲವೇನೊ ಎಂಬ ಭಾವನೆ ರಾಜ್ಯದ ರೈತರಲ್ಲಿ, ಜನರಲ್ಲಿ ವಿಶೇಷವಾಗಿ ಮೂಡಿದೆ. ಒಂದು ಕಡೆ ಬರಗಾಲಕ್ಕೆ ತುತ್ತಾಗಿ ಯಾವುದೇ ಬೆಳೆಗಳು ಕೈಗೆ ಸಿಕ್ಕದೆ ಕಣ್ಣೀರು ಹಾಕುವಂತಹ ಒಂದು ರೀತಿಯ ದಾರುಣ ಸ್ಥಿತಿ, ಮತ್ತೊಂದು ಕಡೆ ನೀರಾವರಿ ಯೋಜನೆಗಳು ಇರುವಂತಹ ಕಡೆಗಳಲ್ಲೂ ಸಹ ತೊಂದರೆ ಇದೆ. ಮಾನ್ಯ ಕೃಷಿ ಸಚಿವರು ಹೇಳಿಕೆಯನ್ನು ಕೊಟ್ಟಿರುವುದು ಪತ್ರಿಕೆಗಳಲ್ಲಿ ಬಹಳ ದೊಡ್ಡ ಅಕ್ಷರಗಳಲ್ಲಿ ಮುಖ ಪುಟದಲ್ಲಿ ಬಂದಿದೆ. ನಮ್ಮ ರೈತರಿಗೆ ಬುದ್ಧಿ ಇಲ್ಲ, ನಮ್ಮ ರೈತರು ರಾಗಿ, ಜೋಳ, ಭತ್ತ, ಬೆಳೆದು ಹಾಳಾಗುತ್ತಿದ್ದಾರೆ, ಅವರಿಗೆ ವಾಣಿಜ್ಯ ಬೆಳೆಯನ್ನು ಬೆಳೆಯಿರಿ ಎಂದು ನಾನು ಹೇಳುತ್ತಿದ್ದೇನೆ. ಆದರೆ ರೈತರು ಮುಂದೆ ಬರುತ್ತಿಲ್ಲವೆಂಬ ಮಾತನ್ನು ಹೇಳಿದರು. ಅವರು ಅದನ್ನು ಯಾವ ಹಿನ್ನೆಲೆಯಲ್ಲಿ ಹೇಳಿದರೊ, ಆದರೆ ಅದನ್ನು ನಾವು ಒಂದು ಒಳ್ಳೆಯ ಸ್ಪಿರಿಟ್‌ನಲ್ಲಿ ತೆಗೆದುಕೊಳ್ಳೋಣ.